**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂ.ಬಿಟಿಇ 01 ಇಪಿಎಸ್ 2019

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:20/06/2019.

## ಸುತ್ತೋಲೆ

ವಿಷಯ: ರಾಜ್ಯದಲ್ಲಿನ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ಪ್ರಸ್ತಾವನೆಯನ್ನು ಪೂರ್ಣ ವಿವರದೊಂದಿಗೆ ಪರಿಶೀಲಿಸಿ ಸಲ್ಲಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಕೆಲವು ಸರ್ಕಾರಿ/ಅನುದಾನಿ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಅಪೂರ್ಣವಾದ ಮಾಹಿತಿಯ ಪ್ರಸ್ತಾವನೆಯನ್ನು ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುತ್ತಿರುವುದು ಕಂಡುಬಂದಿದೆ. ಇದರಿಂದ ಸೂಕ್ತ ಕ್ರಮ ಕೈಗೊಳ್ಳುವುದು ಕಷ್ಟ ಸಾಧ್ಯವಾಗುತ್ತಿದೆ. ಆದ್ದರಿಂದ ಎಲ್ಲಾ ಸಂಸ್ಥೆಯ ಪ್ರಿನ್ಸಿಪಾಲರು ವೈಯಕ್ತಿಕ ಗಮನ ಹರಿಸಿ ಈ ಕೆಳಕಂಡಂತೆ ಸೂಚಿಸಲಾದ ಮಾಹಿತಿಯನ್ನು ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಎಲ್ಲಾ ಸಂಸ್ಥೆಯ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅಪೂರ್ಣವಾದ ಮಾಹಿತಿ ನೀಡಿದಲ್ಲಿ ಸಂಬಂಧಪಟ್ಟ ಪ್ರಿನ್ಸಿಪಾಲರೇ ನೇರ ಜವಾಬ್ದಾರರಾಗಿರುತ್ತಾರೆಂದು ತಿಳಿಸಿಲಾಗಿದೆ.

1) ಸಂಸ್ಥೆಯ ಆವರಣ ಪತ್ರದ (Letter Head) ಮೂಲಕ ಪ್ರಸ್ತಾವನೆಗಳನ್ನು ಪ್ರಿನ್ಸಿಪಾಲರ ಪೂರ್ಣ ಸಹಿಯೊಂದಿಗೆ ಸಲ್ಲಿಸುವುದು.
2) ಅಭ್ಯರ್ಥಿಯ ಪೂರ್ಣವಿವರದ ಅರ್ಜಿ
3) ಚಾಲ್ತಿಯಲ್ಲಿರುವ ಆದೇಶದಂತೆ ನಿಗಧಿತ ಶುಲ್ಕದ ವಿವರ ಪರಿಶೀಲನೆ ಮಾಡಿ ಪ್ರಸ್ತಾವನೆಯನ್ನು ಸಲ್ಲಿಸುವುದು.
4) ಪ್ರಾಂಶುಪಾಲರಿಂದ ವಿವರವಾದ ಪೂರ್ಣ ಮಾಹಿತಿಯೊಂದಿಗೆ ಸ್ಪಷ್ಟೀಕರಣವನ್ನು ನೀಡುವುದು.
5) ಅಭ್ಯರ್ಥಿಯು ಶುಲ್ಕ ಪಾವತಿಸಿದ ಮೂಲ ರಸೀದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.
6) ಅಭ್ಯರ್ಥಿಯ ಅರ್ಜಿಯ ಮೇಲೆ ಯಾವುದೇ ಹಿಂಬರಹದ ಮೂಲಕ ಅರ್ಜಿಯ ಪ್ರಸ್ತಾವನೆಯನ್ನು ಸಲ್ಲಿಸಬಾರದು.
7) ಅಭ್ಯರ್ಥಿಗೆ ತುರ್ತಾಗಿ ಅಂಕಪಟ್ಟಿ/ಪ್ರಮಾಣ ಪತ್ರದ ಅವಶ್ಯಕತೆಯಿದ್ದಲ್ಲಿ ಅರ್ಹ ಸೂಕ್ತ ದಾಖಲೆಯೊಂದಿಗೆ ತುರ್ತಾಗಿ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

–2

8) ನಕಲು ಅಂಕಪಟ್ಟಿ ಹಾಗೂ ನಕಲು ಡಿಪ್ಲೊಮಾ ಪ್ರಮಾಣ ಪತ್ರ ಪಡೆಯುವ ಸಂಬಂಧ ಅಫಿಡವಿಟ್‌ನಲ್ಲಿ ಸಂಬಂಧಪಟ್ಟ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳ ಪೂರ್ಣ ವಿವರಗಳನ್ನು ನಮೂದಿಸಿರುವ ಬಗ್ಗೆ ಹಾಗೂ ವಿದ್ಯಾರ್ಥಿಯ ಸಹಿಯನ್ನು ಪರಿಶೀಲಿಸಿ ಸಲ್ಲಿಸುವುದು.(ನೋಂದಣಿ ಸಂಖ್ಯೆ, ವರ್ಷ, ಫಲಿತಾಂಶ, ಅಂಕಪಟ್ಟಿ/ ಪ್ರಮಾಣ ಪತ್ರ ಸಂಖ್ಯೆ)

ಕಾರ್ಯದರ್ಶಿ 20/06/19

20/6/19

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.

ಪ್ರತಿ:

1) ಇ-ಆಡಳಿತ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2) ಪರೀಕ್ಷಾ ವಿಭಾಗದ ಎಲ್ಲಾ ವಿಭಾಗದ ಅಧೀಕ್ಷಕರು/ಕಾರ್ಯನಿರ್ವಾಹಕರುಗಳಿಗೆ - ಮುಂದಿನ ಕ್ರಮಕ್ಕಾಗಿ.
3) ಉಪ ನಿರ್ದೇಶಕರು(ಪರೀಕ್ಷೆ) - ಮಾಹಿತಿಗಾಗಿ.
4) ಸಹಾಯಕ ನಿರ್ದೇಶಕರು(ಪರೀಕ್ಷೆ)- ಮಾಹಿತಿಗಾಗಿ.
5) ತಾಂತ್ರಿಕ ಸಹಾಯಕರುಗಳಿಗೆ -ಮಾಹಿತಿಗಾಗಿ.
6) ಕಛೇರಿ ಪ್ರತಿ.